ು ಪ್ರಭುತ್ವವ
ುವ ಕಾರ್ಯಗಳನ್ನೂ
ಕ್ಷಿಸಿತು. ಕ್ಲೋಸ್‌ಪೇಟೆ ಮ
ನ್ನಪಟ್ಟಣ ತಾಲ್ಲೋಕುಗಳಲ್ಲಿ ಪಾನ ನಿ
ೋಧ ಪ್ರಯೋಗ ಕಾರ್ಯವನ್ನು ತರು
ವುದರಲ್ಲಿ ಆ ತಾಲ್ಲೋಕುಗಳ ಜನಾಭಿ
ಪ್ರಾಯವೇನಿದೆ ಎಂಬುದನ್ನು ಪ್ರತಿನಿಧಿ
ಗಳಿಂದ ತಿಳಿಯಲು ಸಮಿತಿ ಸೂಚಿಸಿದೆ.
ಸಂಸ್ಥಾನಾದ್ಯಂತ ಸಂಪೂರ್ಣ ಪಾನ ನಿ
ರೋಧ ಶಾಸನ ತರಲು ಸಾರ್ವಜನಿಕರ
ಅಭಿಪ್ರಾಯ ಮತ್ತು ಸಲಹೆಯನ್ನು ತಿಳಿ
ಯುವ ಸಲುವಾಗಿ ಪ್ರಶ್ನಾವಳಿಯನ್ನು
ಪ್ರಕಟಿಸಬೇಕೆಂದು ಸಮಿತಿ ತೀರ್ಮಾನಿ
ಸಿದೆ ಕಾರ್ಮಿಕೇತ್ಯಾದಿ ಸಂಘ ಪ್ರತಿ
ನಿಧಿಗಳು ಮತ್ತು ವಿಶೇಷ ಜ್ಞಾನ ಮ
ತ್ತು ಅನುಭವ ಹೊಂದಿರುವ ಇತರರ
ನ್ನು ಈ ಬಗ್ಗೆ ಪರೀಕ್ಷಿಸಬೇಕಿರದು ಸ
ಮಿತಿಯ ಸೂಚನೆಯಾಗಿದೆ ಇದೇ
ತಾ| 24 ಮತ್ತು 29 ರಲ್ಲಿ ಮುಂದಿನ ಸ
ಭೆ ಸೇರುತ್ತದೆ.

ಕೇಂದ್ರ ಸಭೆಯಲ್ಲಿ ಹಣಕಾಸಿನ ವಿಚಾರ

ನವದೆಹಲಿ ಫೆ 6 — ಹತ್ತು ಕೋ
ಟಿ ರೂಪಾಯಿಗಳಷ್ಟು ಭಾರಿ ಮೊತ್ತದ
ನೋಟುಗಳು ಚಲಾವಣೆ ಆಗಲಿಲ್ಲ, ಎಂ
ಬುದಾಗಿ ಆರ್ಥಿಕ ಸದಸ್ಯ ಶ್ರೀ ಲಿಯಾ
ಕತ್ ಅಲಿಖಾ ಕೇಂದ್ರ ಸಭೆಯಲ್ಲಿ ತಿ
ಳಿಸಿದರು.

ಪ್ರಜಾಪ್ರತಿನಿಧಿಗಳಿಗೇ ಸ್ಥಾನ

ನವದೆಹಲಿ ಫೆ 6 — ಬ್ರಿಟಿಷ್ ಭಾ
ರತ ಸಂಧಾನ ಸಮಿತಿಗೆ ಸಂಸ್ಥಾನ ಪ್ರಜ
ಗಳ ಸಂಧಾನ ಸಮಿತಿ ಸಲ್ಲಿಸಿರುವ ಮ
ನವಿಯಲ್ಲಿ ರಾಜ್ಯಾಂಗ ನಿರ್ಮಾಣ ಸಭೆ
ಗೆ ಪ್ರತಿನಿಧಿಗಳನ್ನು ಆರಿಸುವ ಹಕ್ಕು
ರಾಜರಿಗೆ ಸೇರದ್ದಲ್ಲವೆಂದೂ ಪ್ರಜೆಗಳಿ
ಗೆ ಸೇರಿದ್ದೆಂದೂ ತಿಳಿಸಲಾಗಿದೆ.

ರಾಜಕೃಪಾತಶ್ರಯದಲ್ಲೇ ಜವಾಬ್ದಾ
ರಿ ಸರ್ಕಾರ ಬೇಡಿಕೆ ಇರುವುದರಿಂದ ರಾ
ಜರು ಭಯ ಪಡುವುದಕ್ಕೆ ಅವಕಾಶವಿ
ಲ್ಲವೆಂದು ಸಂಸ್ಥಾನ ಪ್ರಜಾ ಸಮ್ಮೇಳ
ನಾಧ್ಯಕ್ಷ ಡಾ|| ಪಟ್ಟಾಭಿ ತಿಳಿಸಿ
ದ್ದಾರೆ.

ದ್ರಾವಿಡ ಶಾಸನ ಸಭಾ ಭವನದ ಮುಂದೆ ಉಪವಾಸ ವ್ರತ

ಮದ್ರಾಸ್, ಫೆ 7 — ಉಕ್ತ
ಪ್ರಾಸ್ ನೇಯ್ಗೆ ಕಾರ್ಮಿಕರ ಸಂ
ಕ್ಷೇಮ ಮತ್ತು ಖಜಾಂಚಿಗಳಾದ ಶ್ರೀ ವಿ
ಎಂ. ಷಣ್ಮುಗಂ ಮತ್ತು ಶ್ರೀ ಎ. ಲೋ
ಕನಾಥ ಮೊದಲಿಯಾರ್‌ರವರು ಶಾಸನ
ಸಭಾ ಭವನದ ವಿಸ್ತೃತ ಆವರಣದಲ್ಲಿ ಸೆಂಟ್
ಜಾರ್ಜ್ ಕೋಟೆ ಎದುರಿಗೆ ಕುಳಿತಿದ್ದು
ಈ ಬೆಳಿಗ್ಗೆ ಕಂಡು ಬಂದಿತು. ನೇ
ಯ್ಗೆಯವರಿಗೆ ದಾರ ಸರಬರಾಜು ಅ
ನ್ಯಾಯವಾಗಿ ಮಿಲ್ಲುಗಳ ಪರ ಪಕ್ಷಪಾತವಾಗಿ
ವುದನ್ನು ಪ್ರತಿಭಟಿಸುವ ಸಲುವಾಗಿ ಉಪವಾಸ ಮುಷ್ಕರ ಹೂ
ಡಿದಾಗಿ ರಟ್ಟಿನ ಮೇಲೆ ಬರೆಯಲ್ಪ
ಟ್ಟಿದ್ದನ್ನು ಅಲ್ಲಿ ಕಾಣಲಾಯಿತು.

ವಿವಿಧ ವರ್ತಮಾನ

ಬೆಂಗಳೂರು, ಫೆ 7 — ಅಖಿಲ ಭಾ
ರತ ಮುಸ್ಲಿಂ ಲೀಗಿನ ನೇರ ಕಾರ್ಯಾಚ
ರಣೆ ವಿವರಿಸುವ ಹಬಿದುರ್ ರಹ್ಮಾನ್
ಎಂದು ರುಜು ಮಾಡಿರುವ ಎಲ್ಲಾ ಹಸ್ತ
ಪತ್ರಿಕೆಗಳಿಗೂ ಮೈಸೂರು ಸರ್ಕಾರವು
ಮುಟ್ಟುಗೋಲು ಹಾಕಿದೆ

ಂ ಂ

ಲಾಹೋರು, ಫೆ 6 — ಸೋನೇಪ
ಟ್ ಜಲಂಧರ್ ಮತ್ತು ಸಿಂಲಾ ಜೈಲಿನ
ಲ್ಲಿರುವ ಖೈದಿಗಳಲ್ಲಿ ನೂರಾರು ಮಂದಿ
ಗೆ ಮೇಲ್ಪಟ್ಟು ಅನ್ನ ಮುಷ್ಕರ ಆರಂಭಿ
ಸಿದ್ದಾರೆ

ಂ ಂ

ನವದೆಹಲಿ ಫೆ 7 — ಇಪ್ಪತ್ತೈದು
ವರ್ಷಗಳಲ್ಲಿ ಭಾರತದಲ್ಲಿ ಡಾಕ್ಟರುಗಳು
ಶೇ 40 ರಷ್ಟು ಹೆಚ್ಚಬೇಕೆಂದೂ ತಿಕ್ಕಿತ
ರಾದ ನರ್ಸುಗಳ ಸಂಖ್ಯೆ ಇಮ್ಮಡಿಯಾ
ಗಬೇಕೆಂದೂ ಮಂತ್ರಿ ಮುಂಡಳದ ಆ
ರೋಗ್ಯ ಸದಸ್ಯ ಗಜನಾರ ಅಲೀ ಖಾನ
ರು ನಿನ್ನೆ ಅಖಿಲ ಭಾರತ ಮೆಡಿಕಲ್ ಇನ
ಸ್ಟ್ಯೂಟಿನ ಆರಂಭ ಭಾಷಣದಲ್ಲಿ ತಿಳಿಸಿ
ದರು.

ಪ್ರಯತ್ನ ಈ

ಸೇವೆಕರು

7 — ಮುದುಪೇಟೆ
ೀಡು ನಡೆದಾಗ ಗಾ
ಸರಿಗೆ ಪ್ರಶಸ್ತಿಗಳನ್ನು
ಆಗ ಮಾಡಿದ ಭಾಷಣದ
ರಿಂದ ಹಿಡಿದು ಅತಿಕೀಳು ದ
ಪೋಲೀಸು ಜವಾನನವರೆಗೆ ಎ
ನ್ನೋಕರೂ ತಾವು ಜನರ ಸೇವಕ
ರೆಂದು ತಿಳಿದು ಕೆಲಸ ಮಾಡಿದರೆ ಅ ವ
ರ ಕೆಲಸಗಳು ಎಷ್ಟೋ ಸುಲಲಿತವಾಗಿ
ರುವುದೆಂದು ಹೇಳಿದರು.

ಸಂಸಾರ ವ್ಯಾಜ್ಯದಲ್ಲಿ ಎರಡು ಮರಣ

ಮದರಾಸು ಪೆ 7 — ವೆನಿಯಾಟಿ
ನಾಂಪೇಟೆಯಲ್ಲಿ ಒಂದು ಸಂಸಾರದ
ಲ್ಲಿ ವ್ಯಾಜ್ಯ ಹುಟ್ಟಿ ಹೊಡೆದಾಟ ಪ್ರಾ
ರಂಭವಾಗಿ ಬಾಲ ಸುಂದರಂ ಎಂಬುವ
ನು ತನ್ನ ಸಹೋದರಿ ಸ್ವರ್ಣಂಬಾಳ್
ಎಂಬುವಳನ್ನು ಮತ್ತಿತರ 4 ಮಂದಿಯ
ನ್ನು ಚೂರಿಯಿಂದ ಇರಿದು ನಂತರ ತನ್ನ
ಕತ್ತನ್ನು ಕತ್ತರಿಸಿಕೊಂಡನು. ಬಾಲ
ಸುಂದರಂ ಮತ್ತು ಸ್ವರ್ಣಂಬಾಳ್ ಸತ್ತ
ರು. ಮಿಕ್ಕವರು ಚಿಕಿತ್ಸೆ ಹೊಂದು
ತ್ತಿದ್ದಾರೆ.

ಭೂವನಾಲ. ಪೆ 6 — ಇಲ್ಲಿಯ ಶಾ
ಜಕೀಯ ಸುಧಾರಣೆಯಲ್ಲಿ ಒಂದು ಮು
ಖ್ಯ ವಿಷಯ ಪ್ರಕಟಿಸಲಾಗಿದೆ. ಮಂ
ತ್ರಿಯ ಜೊತೆಗೆ ಇರುವ ೪ ಮಂದಿ
ಮಂತ್ರಿಗಳಲ್ಲಿ ೩ ಮಂದಿ ರಾಜಕೀಯ
ಸಂಸ್ಥೆಗಳಿಂದ ಆರಿಸಿವ ಖಾಸಗೀ ಮಂ
ತ್ರಿಗಳು.

ದ್ಧದ ಪರಿಹಾರಾರ್ಥ
ಗೆ ಯಂತ್ರ ತಯಾರಿಸುವ ಎರಡು
ಕಾರ್ಖಾನಾ ಸಾಮಗ್ರಿಗಳನ್ನು ವಶ್ತು
ಕೆಲ ಕೈಗಾರಿಕಾ ಸಾಮಗ್ರಿಗಳನ್ನೂ
ಕೊಡಲಾಗುವುದೆಂದು ಪ್ರಕಟವಾಗಿದೆ.

ಟೋರ್‌ಗ್ಯಾಸು ಪ್ರಯೋಗಕ್ಕೆ ಪರಿಹಾರ

.....

ಲಾಹೋರು ಫೆ 6— ಪೋಲೀಸು
ವ್ಯಾನಿನೊಳಗೆ ಕೂರಿಸಿ ಟೇರ್‌ಗ್ಯಾಸ
ನ್ನು ಬಿಡಲಾಯಿತೆಂದು ಹೇಳಿ, ಬೇಗಂ
ಫಿರೋಜಖಾ ನೂರರು ಇನ್‌ಸ್ಪೆಕ್ಟರ್
ಜನರಲ್ ಆಫ್ ಪೋಲೀಸರನ್ನು ಬಂದು
ಲಕ್ಷ ರೂ. ಪರಿಹಾರ ದ್ರವ್ಯ ಕೊಡ
ಬೇಕೆಂದು ಕೇಳಿದ್ದಾರೆ. ಬೇಗಂ ಜರೀನ
ರಜಾಕ್ ಎಂಬಾಕೆಯು ಇದೇ ಕಾರಣ
ವನ್ನು ತೋರಿಸಿ ಹತ್ತು ಸಾವಿರ ರೂ.
ಪರಿಹಾರ ಕೇಳಿದ್ದಾರೆ.

ಲೀಗ್ ಖೈದಿಗಳು

.....

ಲಾಹೋರು ಫೆ 6— ಲೀಗು ಮುಂ
ದಾಳುಗಳನ್ನೆಲ್ಲಾ ಫೋರ್ಟು ಸೆರೆಮನೆಗೆ
ಸೇರಿಸಲಾಗಿದೆ. ಶಾಸನ ಸಭೆಯು ಲೀ
ಗು ಸದಸ್ಯರ ಸಂಖ್ಯೆ 79. ಆ ಪೈಕಿ
74 ಮಂದಿ ಸೆರೆಮನೆಯಲ್ಲಿದ್ದಾರೆ. ಹದಿ
ಮೂರು ಸಾವಿರ ಮಂದಿ ಲೀಗ್ ಸತ್ಯಾ
ಗ್ರಹಿಗಳು ಕಾರಾಗೃಹ ಸೇರಿರುವುದಾ
ಗಿ ಲೀಗ್ ಅವರಣದಿಂದ ತಿಳಿಯಬಂದಿ
ದೆ.

ದೀಪದ ಕಡ್ಡಿ

.....

ಕೆಳೆದ ನೂರು ವರ್ಷಗಳಿಂದ ಸ್ವೀಡ
ನ್ನು ನಲವತ್ತು ಸಾವಿರಕ್ಕೆ ಮೇಲ್ಪಟ್ಟು
ವಿವಿಧ ಲೇಬಲ್‌ಗಳನ್ನೊಳಗೊಂಡ ದೀ
ಪದ ಕಡ್ಡಿ ಪೆಟ್ಟಿಗೆ ಹೊರಡಿಸಿದೆ.

ವಾಸಗಳುಂದಿಗೆ ದೇವಾಲ
ಟರು ದೇವತಾ ಪ್ರತಿಷ್ಠೆ ಬಗ್ಗೆ
ಮಾಡಲು ಸಂಕಲ್ಪ ಮಾಡಲೆಳಿಸಿ ಆ
ಯಾ ಮಂತ್ರಗಳನ್ನು ಮನನ ಮಾಡುವ ಈ
ವೇಳೆಗೆ ತನ್ನ ಹೃದಯ ಪುಂಡರೀಕದಲ್ಲಿ
ಯು ಈಶ್ವರನನ್ನು ಆಶಿಲೆಯಲ್ಲಿ ಆರೋಪಿ
ಸಬೇಕೆಂದು ಅನ್ವಯವಾಗಿ ತನ್ನ ಸುತ್ತ
ಲೂ ನೋಡಲು ಎಲ್ಲರ ಮೋರೆಗಳಲ್ಲಿ
ಯೂ ಗುಲಾಮತನ ಮತ್ತು ಪರಾಧೀನತೆ
ಗಳು ತಾಂಡವಾಡುತ್ತಿದ್ದವು. ಕೂಡ
ಲೇ ಅತನು ಇಷ್ಟು ವರ್ಷಗಳಿಂದ ಈ
ಪುಂಡಲದೆಲ್ಲಾ ಸ
ಕ ಮೋಕ್ಷ ಸ್ತ್ರೀ ವರ
ಎಲೆ ವಿಲ್ಲನ್‌ಸನ್ನರು ತಿ

Edited, Printed and
by M. S Krishna R
Satyavadi Press Chama
har, Mysore.

ಪೂರೈಸುವ
ಎಳಲು ಮನ
ಆಣೆ, ಪೋಸ್ಟೆ
ಕಳುಹಿಸಬೇಕು
ಪೋಸ್, ಮೈ

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ಮಹಾರಾಜ ಸಂಚಿಕೆ
ವಾರ್ಷಿಕಚಂದಾ
ಸ್ಥಳಕ್ಕೆ ಅಂಚೆವೆಚ್ಚ ಸೇರಿ 1-12-0

JR —
—2—47
for 4 Days only
at 10-30 a. m.
"Topper"
A Hal Roach Comedy

At Opera — From 4–2–47
THE SECRET CODE
t Change — Stagedoor Canteen
ing Shows from 7—2—47 — PINOCCHIO
anjit From 31–1–47
SHAHJEHAN
ಸೈಗಾಲ್, ಜೈರಾಜ್, ರಾಗಿನಿ, ನಸೀಂ ಪಾತ್ರವಹಿಸಿರುವ
ಷಹಜಹಾನ್

ಸುಖ ಆರೋಗ್ಯ ಆನಂದದಾಯಕ
ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.
ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನ್ನಾಹನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಟಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸೇರು ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.
ನಮ್ಮ ಸುಗಂಧ ಅಡಿಕೆಪುಡಿ ಒಂದು ವೈಶಿಷ್ಟ್ಯ.
ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಮಾತರಿಯಾದುದು. ವಿವರಗಳಿಗೆ ಮತ್ತು ಸ್ಟಾಂಪಲಿಗೆ ಬರೆಯಿರಿ —
ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಸ್ಟೇಟುಗಳ ಹರಾಜು
ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—
ಮೈಸೂರು ಸಿಟಿ ವಾಣಿವಿಲಾಸ ಮೊಹಲ್ಲಾದಲ್ಲಿ ಗೋಕುಲಂ ರೋಡಿನ ಪಶ್ಚಿಮ ದಿಕ್ಕಿನಲ್ಲಿರುವ ಕಾಟೇಜ್ ಮತ್ತು ಬಂಗ್ಲೋ ಸೈಟುಗಳನ್ನು ತಾ || 12–1–47 ನೇ ಮುರ್ಕುಂ ಹರಾಜು ಇಸ್ತಿಹಾರ್ ನಾಮೆಯ ಪರತ್ತುಗಳಿಗೆ ವಳಪಡಿಸಿ ತಾ || 16–2–1947 ನೇ ಭಾನುವಾರ ಹೆಳಿಗ್ಗೆ 9–30 ಘಂಟೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ.
ಇತರ ವಿವರಗಳನ್ನು ಆಫೀಸಿನಲ್ಲಿ ರಜಾದಿನಗಳಲ್ಲದ ಇತರ ದಿವಸಗಳಲ್ಲಿ 11 ಘಂಟೆಯಿಂದ 5 ಘಂಟೆವರೆಗೆ ತಿಳಿಯಬಹುದು.
(Sd) K. Venkatesha Iyer
For Chairman
City Improvement Trust Board, Mysore